# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಹೆಗ್ಗನಹಳ್ಳಿ ಉಪವಿಭಾಗ

### ವಾರ್ಡ್ ನಂ.70 :ರಾಜಗೋಪಾಲನಗರ

**ದಿನಾಂಕ: 09.03.2021 ರಂದು ಮಧ್ಯಾಹ್ನ 3.00 ಗಂಟೆಗೆ ಶ್ರೀಮತಿ ಕಮಲ ಹೆಚ್ ನೋಡಲ್ ಅಧಿಕಾರಿ, ವಾರ್ಡ್ 70ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

ಸಭೆಯಲ್ಲಿ ಹಾಜರಿದ್ದವರು:

| ಕ್ರಸಂ | ಹೆಸರು | ಪದನಾಮ |
|---|---|---|
| 1 | ಶ್ರೀಮತಿ ಕಮಲ ಹೆಚ್ | ನೋಡಲ್‌ಅಧಿಕಾರಿ–ವಾರ್ಡ್ ನಂ.70 |
| 2 | ಶ್ರೀ ಹೇಮಂತ್‌ಕುಮಾರ್‌ಎಸ್ ಕೆ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು–ವಾರ್ಡ್ 70 |
| 3 | ಕೆ.ಶಿವಲಿಂಗಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70 |
| 4 | ತ್ರಿವೇಣಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70 |
| 5 | ಡಾ.ಸೌಮ್ಯ | ಪ್ರಾಥಮಿಕ ಆರೋಗ್ಯ ಕೇಂದ್ರ, |
| 6 | ಡಾ.ಅಶ್ವಿನಿ | ಪ್ರಾಥಮಿಕ ಆರೋಗ್ಯ ಕೇಂದ್ರ, |
| 7 | ಶ್ರೀನಿವಾಸ | ಎಸ್.ಪಿ.ಎ (ಹೆಗ್ಗನಹಳ್ಳಿ) |

## :ನಡಾವಳಿಯ ವರದಿ:

ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಹೇಮಂತ್‌ಕುಮಾರ್‌ಎಸ್ ಕೆ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್‌ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತಕೋರಿದರು.

- **ಸ್ವಚ್ಛತೆ ಮತ್ತು ಘನ ತ್ಯಾಜ್ಯ ನಿರ್ವಹಣೆ ಬಗ್ಗೆ:**
  - ಕೆ.ಶಿವಲಿಂಗಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು, ಮಾತನಾಡುತ್ತಾ, ಪಿಳ್ಳಪ್ಪನಕಟ್ಟೆಯಲ್ಲಿರುವ ಡಿ.ಡಬ್ಲ್ಯೂ.ಸಿ ಸೆಂಟರ್‌ನ್ನಲ್ಲಿ ವಿದ್ಯುತ್ ಮೀಟರ್ ಸುಟ್ಟು ಹೋಗಿದ್ದು, ಶೀಘ್ರದಲ್ಲಿ ದುರಸ್ಥಿ ಪಡಿಸಲು ಕೋರಿದರು.
    - ಶ್ರೀಮತಿ ಕಮಲ ಹೆಚ್,ನೋಡಲ್ ಅಧಿಕಾರಿ ವಾರ್ಡ್ 70ರವರು ಸಂಬಂಧಪಟ್ಟವರಿಗೆ ದೂರವಾಣಿ ಮುಖಾಂತರ ಸಂಪರ್ಕಿಸಿ ಶೀಘ್ರದಲ್ಲಿ ವಿದ್ಯುತ್ ಮೀಟರನ್ನು ಸರಿಪಡಿಸಲು ಸೂಚಿಸಿದರು.

- ಕೆ.ಶಿವಲಿಂಗಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು, ಮಾತನಾಡುತ್ತಾ, ಬೀದಿ ಬದಿ ವ್ಯಾಪಾರಿಗಳಿಗೆ ಸಾಲಸೌಲಭ್ಯ ನೀಡಿರುವ ಪಟ್ಟಿಯನ್ನು ಸಭೆಗೆ ನೀಡಿದರು. ಅದರಂತೆ ಒಟ್ಟು 15 ಹೊಸದಾಗಿ ಸಾಲವನ್ನು ಪಡೆದ ವ್ಯಾಪಾರಿಗಳಾಗಿದ್ದು, 35 ವ್ಯಾಪಾರಿಗಳು ಈಗಾಗಲೇ ಸದರಿ ಸೌಲಭ್ಯದ ಫಲಾನುಭವಿಗಲಾಗಿರುತ್ತಾರೆ ಎಂದು ತಿಳಿಸಿದರು.

- ಶ್ರೀಮತಿ ಕಮಲ ಹೆಚ್,ನೋಡಲ್ ಅಧಿಕಾರಿ ವಾರ್ಡ್ 70ರವರು ಮಾತನಾಡಿ ಸ್ವಚ್ಛ ಸರ್ವೇಕ್ಷಣ ಅಭಿಯಾನ 2021 ರ ಬಗ್ಗೆ ಮಾತನಾಡಿ ಬೆಂಗಳೂರು ನಗರಕ್ಕೆ ವೋಟ್ ಮಾಡಿ, ರೇಟಿಂಗ್ ನೀಡುವಂತೆ ಕೋರಿದರು. ಅದಕ್ಕೆ ಸಂಬಂಧಿಸಿದ App and Website link ಗಳನ್ನು ಸಭೆಗೆ ನೀಡಿದರು.

- ಸಭೆಯಲ್ಲಿ ಹಾಜರಿದ್ದ ಡಾ.ಅಶ್ವಿನಿ ರವರು ಮಾತನಾಡಿ ಒಂದು ವಾರದಿಂದ ವಾರ್ಡ್ 70ರ ವ್ಯಾಪ್ತಿಯಲ್ಲಿ 11 ಕೋವಿಡ್ ಸೋಂಕಿತರು ಕಂಡುಬಂದಿರುತ್ತಾರೆ. ಮಾಸ್ಕ್ ಧರಿಸುವ, ಲಸಿಕೆ ಹಾಕಿಸಿಕೊಳ್ಳುವ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

- <u>ರಸ್ತೆ ಗುಂಡಿಗಳ ನಿರ್ವಹಣೆ ಬಗ್ಗೆ</u>
  - ಹೇಮಂತ್‌ಕುಮಾರ್ ಎಸ್.ಕೆ ಸಹಾಯಕ ಅಭಿಯಂತರರು, ವಾರ್ಡ್ ನಂ.70 ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಬಿದ್ದಿರುವ ರಸ್ತೆಗುಂಡಿಗಳನ್ನು ಪಟ್ಟಿ ಮಾಡಿಕೊಂಡು ವೆಟ್ ಮಿಕ್ಸ್ ಅಳವಡಿಸಲಾಗಿದೆ. ಅಂದಾಜು 280 ಟನ್‌ಗಳಷ್ಟು ಡಾಂಬರು ಮಿಕ್ಸು ಬೇಕಾಗಿರುತ್ತದೆ ಎಂದು ತಿಳಿಸಿದರು.
- <u>ವೈಯಕ್ತಿಕ ಒಂಟಿ ಮನೆ ನಿರ್ಮಾಣ ಕಾರ್ಯಕ್ರಮ ಬಗ್ಗೆ</u>
  - ಹೇಮಂತ್‌ಕುಮಾರ್ ಎಸ್.ಕೆ ಸಹಾಯಕ ಅಭಿಯಂತರರು, ವಾರ್ಡ್ ನಂ.70 ರವರು ಮಾತನಾಡಿ ದಾಸರಹಳ್ಳಿ ವಲಯದ ಕಲ್ಯಾಣ ಕಾರ್ಯಕ್ರಮದ ಬಿ.ಸಿ.ಎಂ ಪಿ ಕೋಡ್ 2340ರಡಿಯಲ್ಲಿ ವಾರ್ಡ್ 70ರ ವ್ಯಾಪ್ತಿಯ ಶ್ರೀಮತಿ ರಮಾ.ವಿ ಕೋಂ ಕೃಷ್ಣಕುಮಾರ್ ರವರು ಸದರಿ ಅನುದಾಡಿ ಮನೆ ನಿರ್ಮಿಸಿಕೊಳ್ಳಲು ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ತಿಳಿಸಿ, ಸದರಿ ಅರ್ಜಿಯ ಕಡತವನ್ನು ಸಭೆಯಲ್ಲಿ ಮಂಡಿಸಿದರು.
    - ಸಭೆಯಲ್ಲಿ ಕಡತವನ್ನು ಪರಿಶೀಲಿಸಿ ಸದರಿ ಫಲಾನುಭವಿಯನ್ನು ಕಲ್ಯಾಣ ಕಾರ್ಯಕ್ರಮದ ಬಿ.ಸಿ.ಎಂ ಪಿ ಕೋಡ್ 2340ರಡಿಯಲ್ಲಿ ಅನುದಾನ ನೀಡಲು ಆಯ್ಕೆ ಮಾಡಿ ಅನುಮೋದಿಸಲಾಯಿತು.

- ಇನ್ನಿತರ ಸಮಸ್ಯೆಗಳ ಬಗ್ಗೆ:
  - ಶ್ರೀಮತಿ ಕಮಲ ಹೆಚ್, ನೋಡಲ್ ಅಧಿಕಾರಿ ವಾರ್ಡ್ 70ರವರು ಮಾತನಾಡಿ ವಾರ್ಡ್ ಸಮಿತಿ ಸಭೆಯಲ್ಲಿ ಸಾರ್ವಜನಿಕರು ಸಹ ಪಾಲ್ಗೊಳ್ಳುವುದು ಅವಶ್ಯಕವಿದ್ದು, ಸಭೆಯಲ್ಲಿ ಕುಂದು ಕೊರತೆಗಳನ್ನು ತಿಳಿಸಿದರೆ ಸಮಸ್ಯೆಗಳನ್ನು ಪರಿಹರಿಸಲು ಸಹಾಯವಾಗುತ್ತದೆ ಎಂದು ಅಭಿಪ್ರಾಯಿಸಿ ಮುಂದಿನ ಸಭೆಯಲ್ಲಿ ಕುಂದುಕೊರತೆಗಳನ್ನು ತಿಳಿಸಲು ಸಾರ್ವಜನಿಕರ ಪ್ರತಿನಿಧಿಯಾಗಿ ಸ್ಥಳೀಯ ನಾಗರೀಕರನ್ನು ಸಭೆಗೆ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಸೂಚಿಸಿದರು.

BBMP SAHAYA APP:

- ಹೇಮಂತ್‌ಕುಮಾರ್‌ಎಸ್.ಕೆ ಸಹಾಯಕ ಅಭಿಯಂತರರು, ವಾರ್ಡ್ ನಂ.70 ಮಾತನಾಡಿ ನಮ್ಮ ಇಲಾಖೆಗೆ ಸಂಬಂಧಪಟ್ಟ ದೂರುಗಳಿಗೆ ಶೀಘ್ರಗತಿಯಲ್ಲಿ ಪರಿಹಾರಕ್ರಮ ಕೈಗೊಳ್ಳುತ್ತಿದ್ದು, ಯಾವುದೇ ಸಮಸ್ಯೆಗಳು ಬಾಕಿ ಇರುವುದಿಲ್ಲ ಎಂದು ತಿಳಿಸಿದರು.
- ತ್ರೀವೇಣಿ, ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಪಟ್ಟ ದೂರುಗಳನ್ನು ಪರಿಹರಿಸಲಾಗಿದೆ ಹಾಗೂ ಯಾವುದೇ ಬಾಕಿ ಇರುವುದಿಲ್ಲ ಎಂದು ತಿಳಿಸಿದರು.

- ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ನೌಕರರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡಿನ ಕುಂದುಕೊರತೆಗಳತ್ತ ಗಮನಹರಿಸಿ ವಾರ್ಡ್ ಅಭಿವೃದ್ಧಿ ಪಡಿಸಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.
- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದಶ್ರೀ ಹೇಮಂತ್‌ಕುಮಾರ್ ಎಸ್ ಕೆ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Sd/- 17-03-2021
ಸದಸ್ಯ ಕಾರ್ಯದರ್ಶಿ–ವಾರ್ಡ್ 70 ಹಾಗೂ
ಸಹಾಯಕ ಅಭಿಯಂತರರು,

HKamala 17.3.2021
(ಕಮಲ ಹೆಚ್)
ನೋಡಲ್ ಅಧಿಕಾರಿ ವಾರ್ಡ್–70

ಪ್ರತಿಯನ್ನು:

1) ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರರವರ ಆದ್ಯ ಗಮನಕ್ಕೆ ತರಲಾಗಿದೆ.
2) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
3) ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಂದಾಯ ಅಧಿಕಾರಿ (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.70 ರವರ ಮಾಹಿತಿಗಾಗಿ
7) ಸಹಾಯಕ ಅಭಿಯಂತರರು (ವಿದ್ಯುತ್ ಬೆಸ್ಕಾಂ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
8) ಸಹಾಯಕ ಅಭಿಯಂತರರು (ವಿದ್ಯುತ್ (ಬೀದಿದೀಪ) ಬಿಬಿಎಂಪಿ ರವರ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ
9) ಕಛೇರಿ ಕಡತಕ್ಕೆ